



ಹಕ್ಕಿಗಳ ಉಳಿವಿಗೆ ಶಾಲೆಗಳಲ್ಲಿ ದಂಪತಿಯಿಂದ ಕಾರ್ಯಾಗಾರ



ನಿತ್ಯಾನಂದ ಶೆಟ್ಟಿ, ರಮ್ಯ ದಂಪತಿ ಕಳೆದ ಏಳು ವರ್ಷಗಳಿಂದಲೂ 'ಗುಬ್ಬಚ್ಚಿ ಗೂಡು' ಎಂಬ ಹೆಸರಿನಲ್ಲಿ ರಾಜ್ಯಾದ್ಯಂತ ಇದುವರೆಗೆ ಸುಮಾರು 400 ಶಾಲೆಗಳಿಗೆ ತೆರಳಿ ಪಕ್ಷಿಗಳ ಮಹತ್ವದ ಬಗ್ಗೆ, ಅವುಗಳ ಉಳಿವಿನ ಬಗ್ಗೆ ಉಪನ್ಯಾಸ, ಕಾರ್ಯಾಗಾರ, ಪ್ರಾತ್ಯಕ್ಷಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಮಧ್ಯಪ್ರದೇಶ, ಉತ್ತರ ಪ್ರದೇಶ, ನೇಪಾಳ, ಜಮ್ಮು ಕಾಶ್ಮೀರ, ಒಡಿಶಾ, ಉತ್ತರಾಂಚಲ ಸೇರಿದಂತೆ ಹೊರ ರಾಜ್ಯದಲ್ಲೂ ಪಕ್ಷಿ ಸಂಕುಲ ಉಳಿಸುವುದರ ಕುರಿತು ಕಾರ್ಯಕ್ರಮಗಳನ್ನು ಮಾಡಿದ್ದಾರೆ. ಈ ಕಾರ್ಯಕ್ಕೆ ನಿತ್ಯಾನಂದ ಅವರ ತಾಯಿಯೇ ಸ್ಫೂರ್ತಿ, ಪ್ರೇರಣೆ. ಅವರ ತಾಯಿ ಮನೆಯಂಗಳದಲ್ಲಿ ಪಕ್ಷಿಗಳಿಗೆ ನೀರು, ಧಾನ್ಯಗಳನ್ನು ನಿತ್ಯವೂ ಇಡುತ್ತಿದ್ದರು. ಇದರಿಂದ ಹಲವು ಬಗೆಯ ಪಕ್ಷಿಗಳು ಬಂದು ಕಾಳು ಕಡಿ ತಿನ್ನುತ್ತಿದ್ದವು. ನೀರು ಕುಡಿಯುತ್ತಿದ್ದವು. ಪ್ರತಿದಿನವೂ ಮನೆಯಂಗಳದಲ್ಲಿ ಹಾರಾಡಿಕೊಂಡು ಇರುತ್ತಿದ್ದವು. ಮನೆಯ ಸದಸ್ಯರಂತೆ ಇರುತ್ತಿದ್ದವು! ಅವುಗಳೊಂದಿಗೆ ಬೆಸೆದ ಬಾಂಧವ್ಯ ಇಂದು ಈ ಪಕ್ಷಿಗಳ ಉಳಿವಿನಲ್ಲಿ ತೊಡಗಿಕೊಳ್ಳಲು ಪ್ರೇರಣೆಯಾಗಿದೆ.

'ಗುಬ್ಬಚ್ಚಿ ಗೂಡು' ಎಂಬುದು 15 ವರ್ಷಗಳ ಹಿಂದೆಯೇ ಇವರ ಎರಡು ಎಕರೆ ಜಾಗಕ್ಕೆ ಇಟ್ಟ ಹೆಸರು!. ಆ ಎರಡು ಎಕರೆ ಜಾಗದಲ್ಲಿ ಪಕ್ಷಿಗಳಿಗೆ ಪೂರಕ ವಾತಾವರಣ ಕಟ್ಟಿಕೊಟ್ಟಿದ್ದಾರೆ. ವಿವಿಧ ಜಾತಿಯ ಹಣ್ಣಿನ ಮರಗಳನ್ನು, ಹೂವಿನ ಗಿಡಗಳನ್ನು, ಕಾಳು ಕಡಿ ಮತ್ತು ನೀರಿನ ವ್ಯವಸ್ಥೆ ಮಾಡಿದ್ದಾರೆ. ಇಲ್ಲಿ ಬಿಡುವ ಹೂವು, ಹಣ್ಣು ಎಲ್ಲವೂ ಪಕ್ಷಿಗಳಿಗಾಗಿಯೇ ಮೀಸಲು. ಅದನ್ನು ತಮ್ಮ ಉಪಯೋಗಕ್ಕೆ ಎಂದೂ ಬಳಸುವುದಿಲ್ಲ. ಇಲ್ಲಿ ತರಹೇವಾರಿ ಪಕ್ಷಿಗಳು ಸ್ವಚ್ಛಂದವಾಗಿ ವಿಹರಿಸುತ್ತವೆ.

'ಪಕ್ಷಿಗಳ ಸಂರಕ್ಷಣೆ ನಮ್ಮೆಲ್ಲರ ಹೊಣೆ' ಎಂಬ ಧ್ಯೇಯದೊಂದಿಗೆ ಶಾಲಾ ಕಾಲೇಜಿಗೆ ಹೋಗಿ ಕಾರ್ಯಕ್ರಮ ಮಾಡಲು ಶುರುಮಾಡಿದರು. ಪಕ್ಷಿಗಳಿಗೆ ನೀರುಣಿಸಲು ಉಚಿತವಾಗಿ ಸಾವಿರಾರು ಮಣ್ಣಿನ ಪಾತ್ರೆ, ಬಿದಿರಿನ ಗೂಡುಗಳನ್ನು ಹಂಚಿದ್ದಾರೆ. ಪರಿಸರ ಕಾಪಾಡುವುದು, ಪ್ಲಾಸ್ಟಿಕ್ ತ್ಯಜಿಸುವುದು ಸೇರಿದಂತೆ ಪರಿಸರ ಕಾಳಜಿ ಕುರಿತ ಜಾಗೃತಿ ಕಾರ್ಯಕ್ರಮಗಳನ್ನೂ ಮಾಡುತ್ತಿದ್ದಾರೆ.

'ಗುಬ್ಬಚ್ಚಿ ಗೂಡು' ನೋಂದಾಯಿತ ಸಂಸ್ಥೆಯಲ್ಲ. ಸ್ವಯಂ ಸೇವಾ ಸಂಸ್ಥೆ ಕೂಡ ಅಲ್ಲ. ಹಕ್ಕಿಗಳ ಲೋಕದ ಪರಿಚಯವನ್ನು, ಅವುಗಳನ್ನು ಉಳಿಸಲು ಜಾಗೃತಿ ಕಾರ್ಯಕ್ರಮಗಳನ್ನು ತಮ್ಮದೇ ವೆಚ್ಚದಲ್ಲಿ ಈ ದಂಪತಿ ಮಾಡುತ್ತಿದ್ದಾರೆ. ತಮ್ಮ ಇತರೆ ಐದಾರು ಎಕರೆ ಜಾಗದಲ್ಲಿ ಕೃಷಿ ಮಾಡುತ್ತಾ ಜೀವನ ಸಾಗಿಸುವ ಇವರು, ಹಕ್ಕಿಗಳ ಉಳಿವಿನ ಕಾರ್ಯಕ್ರಮಕ್ಕೆ ಹೋಗಲು ಯಾವಾಗ ಬೇಕಾದರೂ ಅಣಿಯಿರುವವರು.

ತಮ್ಮ ಇಬ್ಬರು ಹೆಣ್ಣುಮಕ್ಕಳಿಗೆ ಪ್ರಕೃತಿ, ನಿಸರ್ಗ ಎಂದೇ ಹೆಸರಿಟ್ಟಿದ್ದಾರೆ. ಪಕ್ಷಿಗಳ ಇಂಚರದ ನಡುವೆಯೇ ಪ್ರೇಮ ವಿವಾಹವಾದ ನಿತ್ಯಾನಂದ ಮತ್ತು ರಮ್ಯ, ಅವರ ಮದುವೆಯಲ್ಲಿ ಸಸಿಗಳನ್ನು ಉಡುಗೊರೆಯಾಗಿ ನೀಡಿದ್ದಾರೆ. ರಮ್ಯ ಅವರ ಸೀಮಂತದಲ್ಲಿ ಬಾಳೆ ಸಸಿಗಳನ್ನು ವಿತರಿಸಿದ್ದಾರೆ. ಮಕ್ಕಳ ನಾಮಕರಣಕ್ಕೆ ಮನೆಮನೆಗೆ ಹೋಗಿ 'ಹಸಿರುಕರಣ' ಎಂದು ಸಸಿಗಳನ್ನು ನೀಡಿ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದಾರೆ. ನಿತ್ಯಾನಂದ ಅವರ ತಂದೆ ತಾಯಿ ತೀರಿಕೊಂಡಾಗ 'ಹಸಿರಾರಾಧನೆ' ಎಂದು ಸಸಿಗಳನ್ನು ನೆಟ್ಟಿದ್ದಾರೆ.

ಈ ಹಿಂದೆ ಮನೆಯ ಜಗುಲಿಯಲ್ಲಿ ಬಂದು ಗೂಡು ಕಟ್ಟುತ್ತಿದ್ದ, ಮನೆಯಂಗಳದಲ್ಲೇ ಸ್ವಚ್ಛಂದವಾಗಿ ಹಾರಾಡುತ್ತಿದ್ದ ಪಕ್ಷಿಗಳು ಇಂದು ಕಣ್ಮರೆಯಾಗಿವೆ.

ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ, ದಟ್ಟ ಮಾಲಿನ್ಯ, ಅರಣ್ಯನಾಶ, ಜಲಮೂಲಗಳ ಬತ್ತುವಿಕೆ, ಹೊಲಗದ್ದೆಗಳು ನಿವೇಶನಗಳಾಗುತ್ತಿರುವುದು, ಆಧುನಿಕ ತಂತ್ರಜ್ಞಾನದ ದುಷ್ಪರಿಣಾಮ, ಮೊಬೈಲ್ ವಿಕಿರಣಗಳಿಂದ ಪಕ್ಷಿಗಳು ಸಾಯುತ್ತಲಿದ್ದು ಇವುಗಳ ಬಗ್ಗೆ ಗಂಭೀರವಾಗಿ ಚಿಂತಿಸುವುದು, ಅಗತ್ಯ ಕ್ರಮಗಳನ್ನು ಕೂಡಲೇ ಕೈಗೊಳ್ಳುವುದು ತುರ್ತು ಅಗತ್ಯವಾಗಿದೆ. ಇಂಥ ಸಂದರ್ಭದಲ್ಲಿ 'ಗುಬ್ಬಚ್ಚಿ ಗೂಡು' ಪಕ್ಷಿಗಳ ಅಳಲು ಕೇಳಲು, ಅವುಗಳನ್ನು ಉಳಿಸಲು ಪಣ ತೊಟ್ಟು ಮಕ್ಕಳ ಮನದಲ್ಲಿ ಪಕ್ಷಿಗಳ ಒಲವನ್ನು ಬಿತ್ತುತ್ತಿದೆ.